ಮೂಲ ದಾವಾ ಸಂಖ್ಯೆ. 248/2016 ಪಿ ಡಬ್ಲ್ಯೂ 4

(ದಿನಾಂಕ 13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಪಿ ಕೆ ವಕೀಲರಿಂದಃ-

ನನ್ನ ಊರು ಹಂಪಸಾಗರ-3 ಗ್ರಾಮ ಎಂದರೆ ಸರಿ. ನಾನು ಎರಡು ಅವಧಿಯವರೆಗೆ ಗ್ರಾಮ ಪಂಚಾಯ್ತಿಯ ಸದಸ್ಯನಾಗಿದ್ದೆ ಎಂದರೆ ಸರಿ ನಾನು ಗ್ರಾಮ ಪಂಚಾಯ್ತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷನಾಗಿದ್ದೆ ಎಂದರೆ ಸರಿ. ದಾವಾಸ್ತಿಯ ಪ್ಲಾಟ್ ನಂ.105 ವಾರ್ಡ ನಂ.7 ಇರುತ್ತದೆ. ಹುಲುಗಪ್ಪ ಇವರಿಗೆ ಸದರಿ ಆಸ್ತಿ ಗ್ರಾಮ ಪಂಚಾಯ್ತಿಯಲ್ಲಿ ಅಲಾಟಾಗಿತ್ತು. ಸದರಿ ಆಸ್ತಿಗೆ ಪಂಚಾಯ್ತಿಯವರು ಪಟ್ಟಾ ನೀಡಿರಲಿಲ್ಲ ನಮೂನೆ ನಂ.10 ನ್ನು ನೀಡಿದ್ದರು. ಟಿ ಬಿ ಡ್ಯಾಂನಲ್ಲಿ ಗ್ರಾಮ ಮುಳುಗಡೆಯಾದ ಸಮಯದಲ್ಲಿ ಹಂಪಸಾಗರ ಗ್ರಾಮ ನಿರ್ಮಾಣವಾಗಿ ಅಲ್ಲಿ ನಿರಾಶ್ರಿತರಿಗೆ ನಿವೇಶನಗಳನ್ನು ಹಂಚಿಕೆ ಮಾಡಿ ಪಟ್ಟಾ ನೀಡಿರುತ್ತಾರೆಂದರೆ ಸರಿ. ದಾವಾಸ್ತಿಯನ್ನು ದಿಃ04-12-1956 ರಂದು ಸರ್ಕಾರದವರು ಗೋಡೌನ್ ಪ್ಲಾಟ್ ಅಂತಾ ಮಾಡಿರುತ್ತಾರೆಂದರೆ ಸುಳ್ಳು. ನಾನು ಗ್ರಾಮ ಪಂಚಾಯ್ತಿ ಸದಸ್ಯ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಅಂತಾ ಕೆಲಸ ಮಾಡಿರುವುದರಿಂದ ಪ್ಲಾಟುಗಳ ಹಂಚಿಕೆಯಾಗಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಸದರಿ ಪ್ಲಾಟು ಹಂಚಿಕೆಯಾಗಿಲ್ಲವೆನ್ನುತ್ತಾರೆ. ದಾವಾಸ್ತಿಯ ಚಕ್ಕುಬಂದಿಯಲ್ಲಿ ತೋರಿಸಿರುವ ಆಸ್ತಿಯನ್ನು ಸರ್ಕಾರದವರು ಹುಂಡೇಕಾರ್ ಕರಿಬಸಮ್ಮ ಇವರಿಗೆ ಮಂಜೂರು ಮಾಡಿದ ಆಸ್ತಿಯಾಗಿರುತ್ತದೆಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಆ ಆಸ್ತಿ ಬೇರೆ ಈ ಆಸ್ತಿ ಬೇರೆ ಎನ್ನುತ್ತಾರೆ. ಹುಂಡೇಕಾರ್ ಕರಿಬಸಮ್ಮ ಇವರಿಗೆ ಹಂಚಿಕೆಯಾಗಿರುವಂತಹ ಆಸ್ತಿ ನಂ.29 ಕಡಬಗೇರಿ ಗಿರಿಯಪ್ಪ ಇವರ ಓಣಿಯಲ್ಲಿ ಬರುತ್ತದೆ. ದಾವಾಸ್ತಿಯ ಚಕ್ಕುಬಂದಿಯಲ್ಲಿ ಆಸ್ತಿ ನಂ.29 ಬರುತ್ತದೆ ಈ ವಿಚಾರ ನನಗೆ ಗೊತ್ತಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸನ್ 1997-98 ರಲ್ಲಿ ಭಜಂತ್ರಿ ಹುಲುಗಪ್ಪ ಇವರು ಗ್ರಾಮ ಪಂಚಾಯ್ತಿ ಅಧ್ಯಕ್ಷನಾಗಿದ್ದನೆಂದರೆ ಸರಿ. ಆ ಸಮಯದಲ್ಲಿ ಭಜಂತ್ರಿ ಹುಲುಗಪ್ಪ ಇವರು ಗ್ರಾಮ ಪಂಚಾಯ್ತಿ ದಾಖಲೆಗಳಲ್ಲಿ ತನ್ನ ಹೆಂಡತಿಯ ಕುರಿತು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾನೆಂದರೆ ಸುಳ್ಳು. ಅಲ್ಲಿ ಪ್ಲಾಟು ಇಲ್ಲದೇ ಇದ್ದರೂ ಸಹಾ ಅದನ್ನು ಸುಧಾಬಾಯಿ ಮತ್ತು ಮೇಘರಾಜ್ ಇವರಿಗೆ ಮಾರಾಟ ಮಾಡಿ ದಾಖಲೆ ಸೃಷ್ಟಿ ಮಾಡಿದ್ದು ಸದರಿ ಖರೀದಿ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಪಾಟ್ ನಂ.29 ರಲ್ಲಿ ರೆಡ್ಡಿನಾಯ್ಕ ಮತ್ತು ದೇವಿಬಾಯಿ ಇವರು ಸ್ವಾಧೀನದಲ್ಲಿರುವ ವಿಚಾರ ನನಗೆ ಗೊತ್ತಿದ್ದರೂ ಸಹಾ ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಮತ್ತು ಸೃಷ್ಟಿಸಿದ ದಾಖಲೆಗಳಾಧಾರದ ಮೇಲೆ ಆದ ಖರೀದಿಪತ್ರಕ್ಕೆ ನಾನು ಸಾಕ್ಷಿ ಅಂತಾ ಸಹಿ ಮಾಡಿರುವುದರಿಂದ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ